**ದಿನಾಂಕ:20/06/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ: ಶ್ರೀಮತಿ. ಬಿ. ಅನುಪಮ ವಕೀಲರಿಂದ:**

ಖಾಸೀಮ್ ಸಾಬರವರ ತಂದೆಯ ಹೆಸರು ಮಹಮದ ಸಾಬ ಆಗಿರುತ್ತದೆ. ಮಸ್ತಾನಸಾಬ ಮತ್ತು ಖಾಸೀಮ ಸಾಬರವರು ಖಾಸಾ ಅಣ್ಣ ತಮ್ಮಂದಿರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮಸ್ತಾನ ಸಾಬ ಮತ್ತು ಖಾಸೀಮ ಸಾಬರವರು ಯಾವ ವರ್ಷ ವಿಭಾಗ ಮಾಡಿಕೊಂಡರು ಎಂದರೆ ಸಾಕ್ಷಿಯು ಬಹಳ ವರ್ಷಗಳ ಹಿಂದೆ ಎನ್ನುತ್ತಾರೆ. ಅವರಿಬ್ಬರು ವಿಭಾಗ ಮಾಡಿಕೊಂಡ ಬಗ್ಗೆ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 1952 ರಲ್ಲಿ ಖಾಸೀ ಸಾಬರವರು ತನ್ನ ಜಮೀನನ್ನು ಕಂಠಯ್ಯ ಸ್ವಾಮಿರವರಿಗೆ ಮಾರಿದ್ದಾರೆ ಎಂದರೆ ಸಾಕ್ಷಿಯು 4 ಎಕರೆ 7 ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. ಕಂಠಯ್ಯ ಸ್ವಾಮಿರವರು ಖರೀದಿ ಮಾಡಿದ ಜಮೀನನ್ನು ಅವರು ಸಂಗಪ್ಪ ಪಾಟೀಲರವರಿಗೆ 1965 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು 4 ಎಕರೆ 7 ಗುಂಟೆ ಜಮೀನನ್ನು ಕಂಠಯ್ಯರವರು ಸಂಗಪ್ಪರವರಿಗೆ ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. ಆ ಪ್ರಕಾರ ಸಂಗಪ್ಪರವರ ಹೆಸರು ಪಹಣಿ ಪತ್ರಿಕೆಯಲ್ಲಿ ಮಾಲಿಕ ಎಂದು ದಾಖಲಾಯಿತು ಎಂದರೆ ಸಾಕ್ಷಿ 4 ಎಕರೆ 7 ಗುಂಟೆ ಜಮೀನಿಗೆ ಸಂಗಪ್ಪನ ಹೆಸರು ದಾಖಲಾಗಿರುತ್ತದೆ ಎನ್ನುತ್ತಾರೆ.

1964-65 ರಲ್ಲಿ ಕರ್ನಾಟಕದಲ್ಲಿ ರಿವಿಜನ ಸೆಟ್ಲಮೆಂಟ ಆಗಿದ್ದರಿಂದ ಯಾರೂ ಯಾವ ಜಮೀನುಗಳಲ್ಲಿ ಕಬ್ಜೆದಾರರು ಆಗಿರುತ್ತಾರೋ ಆ ಜಮೀನಿಗೆ ಕಬ್ಜೆದಾರರ ಹೆಸರು ದಾಖಲಾಗಿರುತ್ತವೆ ಎಂದರೆ ಸಾಕ್ಷಿಯು ಅವರ ಜಮೀನಿನ ಕಬ್ಜೆ ಅವರು ಹೊಂದಿರುತ್ತಾರೆ ಹಾಗೂ ತನ್ನ ಜಮೀನಿನ ಕಬ್ಜೆ ತಾನು ಹೊಂದಿರುತ್ತೆನೆ ಎನ್ನುತ್ತಾರೆ. ಅದೇ ವರ್ಷ ಸಂಗಪ್ಪರವರ ಹೆಸರಿನಲ್ಲಿ ಜನರಲ್ ಸರ್ವೆ ಆಗಿ 4 ಎಕರೆ 18 ಗುಂಟೆ ಜಮೀನಿಗೆ ಪಹಣಿಯಲ್ಲಿ ಹೆಸರು ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು

ಸಂಗಪ್ಪರವರ ಹೆಸರು ಮೋಸತನದಿಂದ ದಾಖಲಾಗಿದೆ ಎನ್ನುತ್ತಾರೆ. ಸಂಗಪ್ಪರವರು ಯಾವ ವರ್ಷ ಮೋಸತನದಿಂದ ತನ್ನ ಹೆಸರನ್ನು ದಾಖಲಿಸಿಕೊಂಡಿದ್ದಾನೆ ಎನ್ನುವುದು ನೆನಪಿಲ್ಲ.

ಜನರಲ್ ಸರ್ವೆ ಆದ ನಂತರ ಯಾರದರು ತಕರಾರು ಸಲ್ಲಿಸುವುದಿದ್ದರೆ 02 ವರ್ಷಗಳಲ್ಲಿ ತಕರಾರು ಸಲ್ಲಿಸಬೇಕು ಎಂದು ನಿಯಮ ಮಾಡಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಆ ರೀತಿ ತಕರಾರು ಮಾಡಬೇಕೆಂದು ತನಗೆ ಯಾರು ಹೇಳಿಲ್ಲ ಹಾಗೂ ತಾನು ಯಾರನ್ನು ಕೇಳಿಲ್ಲ ಎನ್ನುತ್ತಾರೆ. ಸಂಗಪ್ಪರವರು ಕಳೆದ 52 ವರ್ಷಗಳಿಂದ 04 ಎಕರೆ 18 ಗುಂಟೆ ಜಮೀನಿನ ಕಬ್ಜೆ ಹೊಂದಿ ವಹಿವಾಟು ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಯರ ಹೆಸರಿಗೆ 04 ಎಕರೆ 7 ಗುಂಟೆ ಹಾಗೂ ಸಂಗಪ್ಪರವರ ಹೆಸರಿಗೆ 04 ಎಕರೆ 7 ಗುಂಟೆ ಕಬ್ಜೆ ಇದೆ ಎನ್ನುತ್ತಾರೆ.

ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಈ ನ್ಯಾಯಾಲಯದಲ್ಲಿ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಹೆಸರಿಗೆ ಆದ ಹೆಚ್ಚುವರಿ ಜಮೀನನ್ನು ತಿದ್ದುಪಡಿ ಮಾಡಲು ನಾನು ಸಂಬಂಧಪಟ್ಟ ಕಛೇರಿಗೆ ಸಾಕಷ್ಟು ಬಾರಿ ಹೋಗಿದ್ದೆನೆ ಹಾಗೂ 2015 ರಲ್ಲಿ ಆ ಬಗ್ಗೆ ನನಗೆ ಗೊತ್ತಾಗಿರುತ್ತದೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಕಳೆದ 20 ವರ್ಷಗಳಿಂದ ಸದರಿ ತಿದ್ದುಪಡಿ ಮಾಡುತ್ತೇವೆ ಎಂದು ಸಂಬಂಧಪಟ್ಟ ಕಛೇರಿಯವರು ಹೇಳುತ್ತಿದ್ದಾರೆ ಎನ್ನುತ್ತಾರೆ. 11 ಗುಂಟೆ ಜಮೀನು ಪ್ರತಿವಾದಿಯರು ತೆಗೆದುಕೊಂಡಿದ್ದರ ಕುರಿತು ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಸಲ್ಲಿಸಿದ್ದೇನೆ ಎನ್ನುತ್ತಾರೆ. ಸದರಿ ಮೇಲ್ಮನವಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ತಹಸೀಲದಾರ ಕಛೇರಿಗೆ ಬಾಯಿ ಮಾತಿನಲ್ಲಿ ತಿದ್ದುಪಡಿ ಮಾಡಲು ಕೇಳಿಕೊಂಡಿರುತ್ತೇನೆ ಎನ್ನುತ್ತಾರೆ.

ಖಾಸೀಮ ಸಾಬರವರ ತಂದೆಯ ಹೆಸರು ಇಸ್ಮಾಯಿಲ ಸಾಬ ಎಂದರೆ ಸರಿಯಲ್ಲ. ಮಸ್ತಾನ ಸಾಬರವರ ತಂದೆಯ ಹೆಸರು ಮಹಮದ ಸಾಬ ಎಂದರೆ ಸರಿ.

ಖಾಸೀಮ ಸಾಬ ಮತ್ತು ಮಸ್ತಾನಸಾಬರವರು ಒಂದೇ ತಂದೆಯ ಮಕ್ಕಳು ಅಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಸರ್ವೆ ನಂ.166 ಆಗಿರುತ್ತದೆ. ಸಂಗಪ್ಪರವರು ತೀರಿಕೊಂಡ ನಂತರ ಅವನ ಜಮೀನಿನ ದಾಖಲೆ 1 ನೇ ಪ್ರತಿವಾದಿ ಹೆಸರಿಗೆ ಬದಲಾವಣೆ ಆಗಿರುತ್ತದೆ ಎಂದರೆ ಸಾಕ್ಷಿ 1ನೇ ಪ್ರತಿವಾದಿಯ ಹೆಸರಿಗೆ ಹೆಚ್ಚಿನ ಜಮೀನು ದಾಖಲಾಗಿರುತ್ತದೆ ಎನ್ನುತ್ತಾರೆ. 1ನೇ ಪ್ರತಿವಾದಿ ಮತ್ತು ಆತನ ಸಹೋದರನಾದ ನಾಗನಾಥ ನಡುವೆ ವಿಭಾಗ ಆಗಿ ಈಗ ದಾವಾ ಆಸ್ತಿ 2 ನೇ ಪ್ರತಿವಾದಿಯ ಹೆಸರಲ್ಲಿ ಸದರಿ ವಿಭಾಗದ ಪ್ರಕಾರ ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ಈ ದಾವೆ ಸಲ್ಲಿಸಿದ ನಂತರ ಆ ರೀತಿ ವಿಭಾಗ ಆಗಿರುತ್ತದೆ ಎನ್ನುತ್ತಾರೆ. ಈಗ ಸದ್ಯಕ್ಕೆ ದಾವಾ ಆಸ್ತಿ 2ನೇ ಪ್ರತಿವಾದಿಯ ಹೆಸರಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ವಾದಿಯರ ಹೆಸರು ದಾಖಲಾಗಬೇಕೆಂದು ಈ ದಾವೆ ಸಲ್ಲಿಸಿದ್ದೇವೆ ಎನ್ನುತ್ತಾರೆ. ಖಾಸೀಮಸಾಬರವರು ಸಂಗಪ್ಪನಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದರಿಂದ ಖರೀದಿದಾರರಿಗೂ ಹಾಗೂ ನಿಮಗೆ ಮತ್ತು ಪ್ರತಿವಾದಿಯರಿಗೆ ಮತ್ತು ದಾವಾ ಆಸ್ತಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ. ಹೇ. ಕೇ. ಸರಿ ಇದೆ**

**ಸಿವಿಲ್ ಮತ್ತು ಜೆ.ಎಮ್.ಎಫ.ಸಿ ನ್ಯಾಯಾಧೀಶರು**
**ಭಾಲ್ಕಿ.**